
ಪುರಾತತ್ವ, ಸಂಗ್ರಹಾಲಯಗಳು
ಮತ್ತು ಪರಂಪರೆ ಇಲಾಖೆ
ಹಾಗೂ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ
ಒಂದು ರಾಜ್ಯ. ಹಲವು ಜಗತ್ತುಗಳು.
ಪ್ರವಾಸೋದ್ಯಮ ಇಲಾಖೆ

# ಸ್ಮಾರಕ ದತ್ತು ಯೋಜನೆ – Adopt A Monument

ಕರ್ನಾಟಕವು "ಒಂದು ರಾಜ್ಯ, ಹಲವು ಜಗತ್ತು" ಎಂಬ ಭರವಸೆಗೆ ತಕ್ಕಂತೆ ಅನೇಕ ಪ್ರವಾಸೋದ್ಯಮ ಅವಕಾಶಗಳನ್ನು ಒದಗಿಸುತ್ತದೆ. ಕರ್ನಾಟಕವು ಅನೇಕ ನೈಸರ್ಗಿಕ ತಾಣಗಳನ್ನು ಮತ್ತು ಶ್ರೀಮಂತ ಸಾಂಸ್ಕೃತಿಕ ಪರಂಪರೆ ನೆಲೆಗಳನ್ನು ಹೊಂದಿರುವ ನಾಡು. ಯುನೆಸ್ಕೊ ಘೋಷಿಸಿರುವ ವಿಶ್ವ ಪರಂಪರೆಯ ತಾಣಗಳಾದ ಹಂಪೆಯ ಸ್ಮಾರಕಗಳ ಸಮೂಹ, ಪಟ್ಟದಕಲ್ಲಿನ ಸ್ಮಾರಕಗಳ ಸಮೂಹ ಪಶ್ಚಿಮ ಘಟ್ಟಗಳು ಮತ್ತು ಹೊಯ್ಸಳರ ಸಿರಿವಂತ ಶಿಲ್ಪಕಲೆಯ ಬೇಲೂರು–ಹಳೇಬೀಡು ಮತ್ತು ಸೋಮನಾಥಪುರದ ದೇವಾಲಯಗಳನ್ನು ಹೊಂದಿರುವ ಹೆಮ್ಮೆಯ ನಾಡು. ಇದರ ಜೊತೆಗೆ, ಐಹೊಳೆ–ಬಾದಾಮಿ–ಪಟ್ಟದಕಲ್ಲಿನ ದೇವಾಲಯ ವಾಸ್ತುಶಿಲ್ಪ, ಕಲ್ಬುರ್ಗಿ–ಬೀದರ್–ವಿಜಯಪುರದ ದಕ್ಕನ ಸುಲ್ತಾನರ ಕೋಟೆಗಳು, ದ್ವೀಪನಗರ ಎಂದು ಹೆಸರಾದ ಶ್ರೀರಂಗಪಟ್ಟಣದ ಸ್ಮಾರಕಗಳು ಮತ್ತು ವಿಶ್ವ ಪರಂಪರೆಯ ತಾಣವೆಂದು ಘೋಷಣೆಯಾಗುವ ಹೊಸ್ತಿಲಿನಲ್ಲಿವೆ.

ಕರ್ನಾಟಕ ಶ್ರೀಮಂತ ಸಾಂಸ್ಕೃತಿಕ ಪರಂಪರೆ, ಮಹಾನ್ ಸಾಮ್ರಾಜ್ಯಗಳು ಮತ್ತು ನಾಯಕರ ಕಾಲದ ಸ್ಮರಣೀಯ ಕಥೆಗಳನ್ನು ಹೊಂದಿರುವ ಪ್ರದೇಶವಾಗಿದೆ. ಜಾಗತಿಕ ಪ್ರವಾಸೋದ್ಯಮದ ನಕ್ಷೆಯಲ್ಲಿ ಇಲ್ಲಿನ ಪರಂಪರೆಯು ರಾಜ್ಯಕ್ಕೆ ಬಲವಾದ ಸ್ಥಾನವನ್ನು ಸೃಷ್ಟಿಸಿದೆ. ಪಾರಂಪರಿಕ ಪ್ರವಾಸೋದ್ಯಮ ಕರ್ನಾಟಕದ ಪ್ರಮುಖ ವಿಷಯವಾಗಿದೆ. ಕರ್ನಾಟಕವು ಅಂದಾಜು 25,000ಕ್ಕೂ ಮೇಲ್ಪಟ್ಟ ಪಾರಂಪರಿಕ ಸ್ಮಾರಕಗಳನ್ನು ಹೊಂದಿದೆ, ಅವುಗಳಲ್ಲಿ 800ಕ್ಕೂ ಹೆಚ್ಚು ರಾಜ್ಯ ಸರ್ಕಾರ ರಕ್ಷಿಸಿದರೆ, 500ಕ್ಕೂ ಹೆಚ್ಚು ಸ್ಮಾರಕಗಳನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಸಂರಕ್ಷಿಸಿದೆ. ಇಷ್ಟು ಬೃಹತ್ ಸಂಖ್ಯೆಯ ಸ್ಮಾರಕಗಳನ್ನು ಹೊಂದಿರುವ ಕರ್ನಾಟಕ ಭಾರತದ ರಾಜ್ಯಗಳಲ್ಲಿ ಎರಡನೆಯ ಸ್ಥಾನದಲ್ಲಿದೆ.



ರಾಜ್ಯದ ಶ್ರೀಮಂತ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆ ಹಾಗೂ ಇತಿಹಾಸವು ಪ್ರವಾಸೋದ್ಯಮ–ಆಧಾರಿತ ಬೆಳವಣಿಗೆಯನ್ನು ರೂಪಿಸುವಲ್ಲಿ ವಹಿಸಿರುವ ಪಾತ್ರವನ್ನು ಕರ್ನಾಟಕ ಪ್ರವಾಸೋದ್ಯಮ ನೀತಿ 2020–26ರಲ್ಲಿ ಒತ್ತಿ ಹೇಳಲಾಗಿದೆ. ಪರಂಪರೆಯು ನಮ್ಮ ಪ್ರಮುಖ ಪ್ರವಾಸೋದ್ಯಮ ವಿಷಯಗಳಲ್ಲಿ ಒಂದಾಗಿದ್ದು, ಜಾಗತಿಕ ಪ್ರವಾಸೋದ್ಯಮ ನಕ್ಷೆಯಲ್ಲಿ ರಾಜ್ಯಕ್ಕೆ ಭದ್ರವಾದ ಸ್ಥಾನವನ್ನು ನಿರ್ಮಿಸಿದೆ. ಭಾರತದ ದೇಶೀಯ ಪ್ರವಾಸಿಗರ ಪಟ್ಟಿಯಲ್ಲಿ ಕರ್ನಾಟಕವು 4ನೆಯ ಸ್ಥಾನದಲ್ಲಿದ್ದು, ಪ್ರತಿವರ್ಷ ಆರು ಲಕ್ಷಕ್ಕೂ ಹೆಚ್ಚು ವಿದೇಶಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ 'ನೋಡಲೇಬೇಕಾದ 2019ರ ಜಾಗತಿಕ ತಾಣಗಳ ಪಟ್ಟಿ'ಯಲ್ಲಿ ಹಂಪೆಯು ಎರಡನೆಯ ಸ್ಥಾನದಲ್ಲಿದೆ. ಇದು ಕರ್ನಾಟಕದ ಪಾರಂಪರಿಕ ಪ್ರವಾಸೋದ್ಯಮಕ್ಕೆ ದೊರೆತ ಜಾಗತಿಕ ಮೆಚ್ಚುಗೆ. ಕರ್ನಾಟಕ ಸರ್ಕಾರದ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯು (DAMH) ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆ (DoT) ಮತ್ತು ಸಂಬಂಧಿತ ಖಾಸಗಿ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ ನಿಕಟ ಸಹಯೋಗದೊಂದಿಗೆ ಕರ್ನಾಟಕದ ಪಾರಂಪರಿಕ ಸ್ಮಾರಕಗಳ ಸಂರಕ್ಷಣೆ, ಮೂಲಭೂತ ಮತ್ತು ಉನ್ನತ ಸೌಲಭ್ಯಗಳನ್ನು ಒದಗಿಸುವ ಮೂಲಕ ಸ್ಮಾರಕಗಳನ್ನು ಅಭಿವೃದ್ಧಿಪಡಿಸಲು **ಸ್ಮಾರಕ ದತ್ತು ಯೋಜನೆ** – Adopt A Monument ಯೋಜನೆಯನ್ನು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯು ಕರ್ನಾಟಕದ ಸ್ಮಾರಕಗಳನ್ನು ನೋಡಲೇಬೇಕಾದ ಪ್ರವಾಸೋದ್ಯಮ ಅನುಭವ ತಾಣವನ್ನಾಗಿ ಮಾಡಲು ವೇದಿಕೆಯನ್ನು ಸೃಷ್ಟಿಸುವುದಲ್ಲದೆ, ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಸಕ್ರಿಯಗೊಳಿಸುವ ಸಮುದಾಯಕ್ಕೆ ಅವಕಾಶಗಳನ್ನು ಸೃಷ್ಟಿಸುವ ಉದ್ದೇಶವಾಗಿದೆ.

## ಸ್ಮಾರಕ ದತ್ತು ಯೋಜನೆಯ ಉದ್ದೇಶ



- ಕರ್ನಾಟಕದ ಪಾರಂಪರಿಕ ತಾಣಗಳ ಸಂರಕ್ಷಣೆ ಮತ್ತು ಸುರಕ್ಷತೆ.
- ಪಾರಂಪರಿಕ ತಾಣಗಳಲ್ಲಿ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಪ್ರವಾಸೋದ್ಯಮದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು.
- ಪಾರಂಪರಿಕ ತಾಣಗಳಲ್ಲಿ ಪ್ರವಾಸಿಗರ ಅನುಭವವನ್ನು ಶ್ರೀಮಂತಗೊಳಿಸಲು ಅಗತ್ಯ ಸೌಕರ್ಯ ಮತ್ತು ಸೌಲಭ್ಯ ಒದಗಿಸುವುದು.
- ರಾಜ್ಯದ ಸಾಂಸ್ಕೃತಿಕ ಮತ್ತು ಪಾರಂಪರಿಕ ಹಿರಿಮೆಯನ್ನು ಎತ್ತಿ ಹಿಡಿಯುವುದು ಮತ್ತು ಪಾರಂಪರಿಕ ತಾಣಗಳ ಬಗ್ಗೆ ಅರಿವನ್ನು ಹೆಚ್ಚಿಸಲು ಮಾರ್ಗಗಳನ್ನು ರೂಪಿಸುವುದು.
- ಸುಸ್ಥಿರ ಪ್ರವಾಸೋದ್ಯಮ ಸೌಕರ್ಯಗಳನ್ನು ಸ್ಥಾಪಿಸುವುದು ಮತ್ತು ಅವುಗಳನ್ನು ಉತ್ತಮವಾಗಿ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವುದು.
- ಪಾರಂಪರಿಕ ತಾಣಗಳ ಸುತ್ತಲಿನ ಪ್ರದೇಶದ ಜನರಿಗೆ ಅನುಕೂಲವಾಗುವಂತೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮತ್ತು ಅವರ ಜೀವನೋಪಾಯಗಳನ್ನು ಬೆಂಬಲಿಸುವುದು.

**"ಸ್ಮಾರಕ ದತ್ತು ಯೋಜನೆ'** ಯಡಿ ಸ್ಮಾರಕ ಮಿತ್ರರಾಗಲು ಬಯಸುವ ಸಂಸ್ಥೆಗಳು ಪಾರಂಪರಿಕ ಸ್ಮಾರಕ ತಾಣಗಳಲ್ಲಿ ಮೂಲಭೂತ ಸೌಲಭ್ಯಗಳು ಮತ್ತು ಸೌಕರ್ಯಗಳ ಅಭಿವೃದ್ಧಿ / ನಿರ್ಮಾಣ / ಉನ್ನತೀಕರಣವನ್ನು ಕೈಗೊಳ್ಳುವ, ಹಾಗೂ ಈ ಸೌಲಭ್ಯಗಳನ್ನು ಪೂರ್ಣವಾಗಿ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವ ಸಾಮರ್ಥ್ಯವುಳ್ಳವರಾಗಿರಬೇಕು. ಅರ್ಜಿಯನ್ನು ಸ್ಮಾರಕ ದತ್ತು ಯೋಜನೆಗೆ ಸಿದ್ಧಪಡಿಸಲಾದ ನಮ್ಮ ಸ್ಮಾರಕ ಡಿಜಿಟಲ್ ಫ್ಲಾಟ್ ಫಾರಂ ವೇದಿಕೆಯಾದ https://nammasmaraka.in ಅಥವಾ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ಮಿಂಚಂಚೆ (e-mail) ಮುಖಾಂತರ ಅರ್ಜಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಈ ಅರ್ಜಿಗಳ ದಾಖಲೆಗಳನ್ನು ಪರಿಶೀಲಿಸಿದ ನಂತರ 'ಸ್ಮಾರಕ ಮಿತ್ರ'ರನ್ನು ಆಯ್ಕೆಮಾಡಲಾಗುವುದು. ಆರಂಭದಲ್ಲಿ ಐದು ವರ್ಷಗಳ ಅವಧಿಗೆ ಈ ಸೌಲಭ್ಯಗಳನ್ನು ಒದಗಿಸಲು ಸ್ಮಾರಕ ಮಿತ್ರರ ಸುಪರ್ದಿಗೆ ಒಪ್ಪಿಸಲಾಗುವುದು ಮತ್ತು ಈ ಅವಧಿಯಲ್ಲಿ ಕಾರ್ಯಚರಣೆಯು ನಿಯಮಿತ ಪರಿಶೀಲನೆಗೆ, ಪ್ರವಾಸಿಗರು ಮತ್ತು ಇತರ ಭಾಗಿದಾರರ ಪ್ರತಿಕ್ರಿಯೆ, ಹಿಮ್ಮಾಹಿತಿ ಸೇರಿದಂತೆ ಪರಿಶೀಲನೆಗೆ ಒಳಪಟ್ಟಿರುತ್ತದೆ.





## ಮೂಲಭೂತ ಸೌಕರ್ಯಗಳು

ಮೂಲ ಸೌಕರ್ಯಗಳು ಪ್ರವಾಸೋದ್ಯಮದ ಪ್ರಮುಖ ಅಂಶ. ಇವು ಪ್ರವಾಸಿಗರ ಮೊದಲ ಮತ್ತು ಅಗ್ರಗಣ್ಯ ಹಕ್ಕುಗಳೂ ಹೌದು. ಅವುಗಳು ಪ್ರವಾಸಿ ಸ್ಥಳದ ಜನಪ್ರಿಯತೆಯನ್ನು ಹೆಚ್ಚಿಸಬಹುದು; ಪ್ರಚಾರದ ಸಾಧನವಾಗಬಹುದು; ಪುನರಾವರ್ತಿತ ಭೇಟಿಗಳನ್ನು ಹೆಚ್ಚಿಸಬಹುದು. ಪ್ರವಾಸಿಗರ ಸಂಖ್ಯೆ ಹೆಚ್ಚಿದಂತೆ ಸ್ಥಳೀಯ ಆರ್ಥಿಕತೆಗೆ ಪ್ರಚೋದನೆ ದೊರೆಯುತ್ತದೆ. ಆಯಾ ಪಾರಂಪರಿಕ ಸ್ಮಾರಕಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹಾಗೂ ಅಲ್ಲಿನ ಆರ್ಥಿಕ ಚಟುವಟಿಕೆಯ ಸಾಧ್ಯತೆಯನ್ನು ಆಧರಿಸಿ ಗುರುತಿಸಲಾದ ಸ್ಮಾರಕಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬಹುದು. ಅಂತಹ ಸೌಕರ್ಯಗಳ ಸೂಚಕ ಪಟ್ಟಿ ಈ ಕೆಳಗಿನಂತಿದೆ:

- ❖ ಸಾರ್ವಜನಿಕ ಅನುಕೂಲಗಳು– ಶೌಚಾಲಯಗಳು
- ❖ ಕುಡಿಯುವ ನೀರಿನ ಸೌಲಭ್ಯಗಳು / ನೀರಿನ ಸಂಗ್ರಹಗಳು.
- ❖ ಸ್ಮಾರಕಗಳನ್ನು ತಲುಪಲು ಹಾಗೂ ಸಾರ್ವಜನಿಕ ಸೌಲಭ್ಯಗಳನ್ನು ಪ್ರವೇಶಿಸಲು ತಡೆರಹಿತವಾದ / ಎಲ್ಲರೂ ಪ್ರವೇಶಿಸಬಹುದಾದ / ಸುಲಭ ಪ್ರವೇಶ ದಾರಿ – ಕೇಂದ್ರ ಲೋಕೋಪಯೋಗಿ ಇಲಾಖೆಯ ಮಾರ್ಗಸೂಚಿಯಂತೆ ನಿರ್ಮಾಣವಾದ ವಿಭಿನ್ನ ಸಾಮರ್ಥ್ಯದ ಪರಿಸರ ಸ್ನೇಹಿ ಶೌಚಾಲಯಗಳು, ಇಳಿಜಾರುಗಳು, ಗಾಲಿಕುರ್ಚಿ ಸೌಲಭ್ಯ, ಬ್ರೈಲ್ ಚಿಹ್ನೆಗಳು.
- ❖ ಸ್ಮಾರಕ ತಾಣದ ಸ್ವಚ್ಛತೆ (ಸಂಪೂರ್ಣ ಪ್ಲಾಸ್ಟಿಕ್ ನಿಷೇಧ ಸೇರಿದಂತೆ ಸ್ಮಾರಕದ ಸ್ವಚ್ಛತೆ)
- ❖ ಮಗುವಿನ ಆರೈಕೆ ಕೊಠಡಿಗಳು
- ❖ ವಿಶೇಷ ಬೆಳಕಿನ ವ್ಯವಸ್ಥೆ (ಸ್ಮಾರಕದ ಒಳಗೆ ಮತ್ತು ಹೊರಗೆ)
- ❖ ಫಲಕಗಳು (ಸ್ಮಾರಕ ಕುರಿತು ಮಾಹಿತಿ ಹಾಗೂ ಸೂಚನೆ ನೀಡುವುದು)
- ❖ ಪ್ರವಾಸಿಗರಿಗೆ ವಿರಮಿಸಲು ಅಸನ ವ್ಯವಸ್ಥೆ.
- ❖ ಕಸದ ಡಬ್ಬಿಗಳು
- ❖ ವಿಶ್ರಾಂತಿ ಕೊಠಡಿಗಳು
- ❖ ವೈ–ಫೈ ಸೌಲಭ್ಯ
- ❖ ಮೂಲಭೂತ ಕಣ್ಗಾವಲು ವ್ಯವಸ್ಥೆ (ಬುಲೆಟ್ ಸಿಸಿಟಿವಿ ಕ್ಯಾಮೆರಾ, ಇತ್ಯಾದಿ)
- ❖ ಅಪ್ಲಿಕೇಶನ್ ಆಧಾರಿತ ಬಹುಭಾಷಾ ಆಡಿಯೋ–ಗೈಡ್
- ❖ ನಗದು ರಹಿತ ವಹಿವಾಟಿನ ಉತ್ತೇಜನಕ್ಕೆ ಟಿಕೆಟ್ ಕಟ್ಟೆಗಳಲ್ಲಿ ಪಾಯಿಂಟ್ ಆಫ್ ಸೇಲ್ ಟರ್ಮಿನಲ್ (PoS) ಯಂತ್ರಗಳು



## ಉನ್ನತ ಸೌಕರ್ಯಗಳು

ಆಯಾ ಪಾರಂಪರಿಕ ಸ್ಮಾರಕಕ್ಕೆ ಬೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹಾಗೂ ಅಲ್ಲಿನ ಆರ್ಥಿಕ ಚಟುವಟಿಕೆಯ ಸಾಧ್ಯತೆಯನ್ನು ಆಧರಿಸಿ ಗುರುತಿಸಲಾದ ಸ್ಮಾರಕಗಳಲ್ಲಿ ಉನ್ನತ ಸೌಕರ್ಯಗಳನ್ನು ಒದಗಿಸಬಹುದು. ಅಂತಹ ಸೌಕರ್ಯಗಳ ಸೂಚಕ ಪಟ್ಟಿ ಈ ಕೆಳಗಿನಂತಿದೆ:

- ❖ ಉಪಹಾರ ಕಟ್ಟೆ (ಸೇವನೆಗೆ ಸಿದ್ಧವಾಗಿರುವ ತಿಂಡಿಗಳು ಮತ್ತು ಪಾನೀಯಗಳು)
- ❖ ನೋಡಲ್ ಇಲಾಖೆಯ (ಪುರಾತತ್ವ ಇಲಾಖೆ, ರಾಜ್ಯ ಸರ್ಕಾರ ಇತ್ಯಾದಿಗಳ ಬೈಲಾಗಳು) ಮಾರ್ಗಸೂಚಿಗಳ ವ್ಯಾಪ್ತಿಯೊಳಗೆ ಪಾರಂಪರಿಕ ಸ್ಮಾರಕಗಳಿಗೆ ರಾತ್ರಿ ಭೇಟಿಗಳನ್ನು ಏರ್ಪಡಿಸುವುದು.
- ❖ ಸುಧಾರಿತ ಕಣ್ಗಾವಲು ವ್ಯವಸ್ಥೆ (PTZ ಆಧಾರಿತ ಸಿಸಿಟಿವಿ ಕ್ಯಾಮೆರಾಗಳು)



- ❖ ಪ್ರವಾಸಿಗರ ಮಾರ್ಗದರ್ಶನ ಮತ್ತು ಮಾಹಿತಿ ಕೇಂದ್ರಗಳು (ಪ್ರವಾಸಿ ಬಹುಉಪಯೋಗಿ ಕೇಂದ್ರ) ಇದರಲ್ಲಿ ಸಂಗ್ರಹಾಲಯ, ಸ್ಥಳೀಯ ಕಲೆ ಮತ್ತು ಕರಕುಶಲತೆಯನ್ನು ಉತ್ತೇಜಿಸುವ ಸ್ಮರಣಿಕೆಗಳ ಮಾರಾಟ ಕೇಂದ್ರ, ಲಗೇಜ್ ಕೊಠಡಿ, ಶೌಚಾಲಯ, ಕುಡಿಯುವ ನೀರು, ಹಣ ವಿನಿಮಯ ಇತ್ಯಾದಿ ಸೌಲಭ್ಯಗಳಿರಬೇಕು.




- ತಂತ್ರಜ್ಞಾನ ಆಧಾರಿತ ಮಾಹಿತಿ ಒದಗಿಸುವ ಸೌಲಭ್ಯ (ಆಗ್‌ಮೆಂಟೆಡ್ ರಿಯಾಲಿಟಿ, ವರ್ಚುವಲ್ ರಿಯಾಲಿಟಿ, ಮಿಕ್ಸ್ಡ್ ರಿಯಾಲಿಟಿ, ಇತ್ಯಾದಿ)
- ಡಿಜಿಟಲ್ ಇಂಟರ‍್ಯಾಕ್ಟಿವ್ ಕಿಯೋಸ್ಕ್, ಡಿಜಿಟಲ್ ಎಲ್‌ಇಡಿ ಪರದೆಗಳು
- ಧ್ವನಿ ಮತ್ತು ಬೆಳಕಿನ ಪ್ರದರ್ಶನ
- ಸಾಂಸ್ಕೃತಿಕ ಕಾರ್ಯಕ್ರಮಗಳು
- ಬ್ಯಾಟರಿ ಚಾಲಿತ ಚಿಕ್ಕ ವಾಹನಗಳು / ಗಾಲ್ಫ್ ಕಾರ್ಟ್
- ಸುಧಾರಿತ ಪ್ರವಾಸಿ ಹರಿವು ನಿರ್ವಹಣಾ ವ್ಯವಸ್ಥೆ. ಸ್ಮಾರಕದ ಸಾಮರ್ಥ್ಯವನ್ನು ಅನುಸರಿಸಿರಬೇಕು.
- ನಗದು ರಹಿತ ವಹಿವಾಟಿನ ಉತ್ತೇಜನಕ್ಕೆ ಟಿಕೆಟ್ ಕಟ್ಟೆಗಳಲ್ಲಿ ಪಾಯಿಂಟ್ ಆಫ್ ಸೇಲ್ ಟರ್ಮಿನಲ್ (PoS) ಯಂತ್ರಗಳು

## ಸಂರಕ್ಷಣಾ ಕಾರ್ಯಗಳು

ಸ್ಮಾರಕ ಮಿತ್ರರಾಗಿ ಆಯ್ಕೆಯಾದ ಸಂಸ್ಥೆಯು ಸ್ಮಾರಕ ತಾಣದಲ್ಲಿ ಅಸ್ತಿತ್ವದಲ್ಲಿರುವ ಸೌಲಭ್ಯಗಳು ಮತ್ತು ಅಗತ್ಯವಿರುವ ಸೌಲಭ್ಯಗಳ ನಡುವಿನ ಅಂತರವನ್ನು ಅಭ್ಯಾಸ ಮಾಡಿದ ನಂತರ ಪಾರಂಪರಿಕ ತಾಣದ ಸಂರಕ್ಷಣಾ ಕಾರ್ಯಗಳನ್ನು ಕೈಗೊಳ್ಳಬಹುದು. ಸಂರಕ್ಷಣೆ ಕಾರ್ಯಗಳನ್ನು ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಮತ್ತು ಇತರ ನೋಡಲ್ ಇಲಾಖೆಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದಲ್ಲಿ ಕಾರ್ಯಗತಗೊಳಿಸಬೇಕು.

ಸ್ಮಾರಕ ಮಿತ್ರರು ಈ ಸಂರಕ್ಷಣೆ ಮಾಡುವಾಗ ಭಾರತ ಸರ್ಕಾರದ ಕೇಂದ್ರ ಲೋಕೋಪಯೋಗಿ ಇಲಾಖೆಯು ಪ್ರಕಟಿಸಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಯ ಇತ್ತೀಚಿನ ಆವೃತ್ತಿ ಕೈಪಿಡಿಯನ್ನು ಅನುಸರಿಸಬೇಕು. ಪಾರಂಪರಿಕ ಸ್ಮಾರಕಗಳ ಸಂರಕ್ಷಣೆ ಕಾರ್ಯಗಳನ್ನು ಮಾಡುವಾಗ ಈ ಕೆಳಗಿನ ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು:

- ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಸ್ಥಳೀಯ ಪದ್ಧತಿಗಳನ್ನು ಬಳಕೆ ಮಾಡುವುದು.
- ಪುರಾತತ್ವ ಇಲಾಖೆ ಮತ್ತು ಇತರ ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳಿಂದ ರಕ್ಷಿಸಲ್ಪಟ್ಟ ಕಟ್ಟಡಗಳು ಮತ್ತು ಸೈಟ್‌ಗಳಿಗೆ, ಸಂರಕ್ಷಣೆಯ ಅಧಿಕೃತ ಮತ್ತು ಕಾನೂನು ಬದ್ಧವಾದ ಕ್ರಮಗಳನ್ನು ಹಾಗೂ ಅಂತರಾಷ್ಟ್ರೀಯವಾಗಿ ಅಂಗೀಕರಿಸಲ್ಪಟ್ಟ ತತ್ವಗಳನ್ನು ಮಾತ್ರ ಅಳವಡಿಸಿಕೊಳ್ಳಬೇಕು.
- ಆಯಾ ಪಾರಂಪರಿಕ ಸ್ಮಾರಕದ ಶ್ರೇಣಿ ಮಟ್ಟವನ್ನು ಅನುಸರಿಸಿ, ಅದಕ್ಕೆ ಅನ್ವಯಿಸುವ ಎಲ್ಲಾ ಅನುಮತಿಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಬೇಕು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಂದಲೇ ಅನುಮತಿಯನ್ನು ಪಡೆಯಬೇಕು.
- ಪಾರಂಪರಿಕ ಕಟ್ಟಡಗಳು, ಪಾರಂಪರಿಕ ತಾಣಗಳು ಮತ್ತು ನೈಸರ್ಗಿಕ ವೈಶಿಷ್ಟ್ಯ ಪ್ರದೇಶಗಳಿಗೆ ನಿರ್ದಿಷ್ಟವಾದ ಕಟ್ಟಡ ಬೈಲಾಗಳನ್ನು ಅನುಸರಿಸಬೇಕು ಮತ್ತು ಅನ್ವಯವಾಗುವ ಪ್ರಾಧಿಕಾರದಿಂದ ಅಗತ್ಯ ಅನುಮತಿಗಳನ್ನು ಪಡೆಯಬೇಕು.



- ಪುರಾತನ ಸ್ಮಾರಕಗಳು ಮತ್ತು ಪುರಾತತ್ವ ಶಾಸ್ತ್ರದ ಸ್ಥಳಗಳು ಮತ್ತು ಅವಶೇಷಗಳ ಕಾಯಿದೆ ಹಾಗೂ ಯಾವುದೇ ಇತರ ಸಂಬಂಧಿತ ಕಾಯಿದೆಗಳು, ನಿಯಮಗಳು, ಮಾರ್ಗಸೂಚಿಗಳು ಮತ್ತು ಅಧಿಸೂಚನೆಗಳನ್ನು ಅಧ್ಯಯನ ಮಾಡಬೇಕು. ಯಾವುದೇ ಪ್ರಸ್ತಾವಿತ ಕಾಮಗಾರಿಗಳಿಗೆ ಅಗತ್ಯ ಅನುಮತಿಗಳನ್ನು ಪಡೆಯಲು ಎಲ್ಲಾ ಸಂಬಂಧಿತ ಷರತ್ತುಗಳನ್ನು ನೋಡಲ್ ಇಲಾಖೆಗಳ ಗಮನಕ್ಕೆ ತರಬೇಕು.

## ಸ್ಮಾರಕ ಮಿತ್ರರು



**"ಸ್ಮಾರಕ ದತ್ತು"** ಯೋಜನೆಯಡಿಯಲ್ಲಿ ಸ್ಮಾರಕದ ಸಂರಕ್ಷಣೆ, ಪ್ರವಾಸಿ ಮೂಲಭೂತ ಮತ್ತು ಉನ್ನತ ಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಆಯ್ಕೆಯಾದ ಅರ್ಜಿದಾರರನ್ನು **"ಸ್ಮಾರಕ ಮಿತ್ರರು"** ಎಂದು ಕರೆಯಲಾಗುತ್ತದೆ.

### ಸ್ಮಾರಕ ಮಿತ್ರರ ಸೂಚಿತ ಪಾತ್ರಗಳು ಮತ್ತು ಜವಾಬ್ದಾರಿಗಳು :

- ಅವರು ದತ್ತು ತೆಗೆದುಕೊಳ್ಳಲು ಯೋಜಿಸಿರುವ ಎಲ್ಲಾ ಸ್ಮಾರಕ ಪ್ರದೇಶಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಮುನ್ನೋಟ, ಕಾರ್ಯತಂತ್ರ ಮತ್ತು ವಿವರವಾದ ಯೋಜನೆಯನ್ನು ತಯಾರಿಸುವುದು.
- ಅವರು ದತ್ತು ತೆಗೆದುಕೊಳ್ಳುತ್ತಿರುವ ಪ್ರತಿ ಸ್ಮಾರಕ ಪ್ರದೇಶದಲ್ಲಿ ಅಗತ್ಯತೆ ಮತ್ತು ಕೊರತೆಯ ಅಧ್ಯಯನ ನಡೆಸುವುದು.
- ಸ್ಮಾರಕ ಸಮಿತಿಯ ಮಾರ್ಗದರ್ಶನದೊಂದಿಗೆ ಅಗತ್ಯ ಅನುಮೋದನೆಗಳು, ಅನುಮತಿಗಳು, ನಿರಾಪೇಕ್ಷಣಾ ಪತ್ರಗಳು ಇತ್ಯಾದಿಗಳನ್ನು ಪಡೆದುಕೊಳ್ಳುವುದು.
- ಅನುಮೋದಿತ ಮುನ್ನೋಟ, ಪ್ರಸ್ತಾವನೆ ಮತ್ತು ಒಡಂಬಡಿಕೆ ಪತ್ರದ ಅನುಸಾರ ಸೂಚಿತ ಮಟ್ಟದ ಮತ್ತು ಮಾನದಂಡದಂತೆ ಸ್ವತ್ತುಗಳ ನಿರ್ಮಾಣ ಮತ್ತು ಸೇವೆ ಒದಗಿಸುವ ಕೆಲಸಗಳನ್ನು ಆರಂಭದಿಂದ ಅಂತ್ಯದವರೆಗೆ ಪರಿಪೂರ್ಣ ಕೆಲಸ ನಿರ್ವಹಿಸುವುದು.
- ನಿರ್ಮಿಸಲಾದ ಸ್ವತ್ತುಗಳು ಮತ್ತು ಸೇವೆಗಳ ಅನುಷ್ಠಾನ ಮತ್ತು ನಿರ್ವಹಣೆಯನ್ನು (ಒ&ಎಂ) ಮಾಡುವುದು.
- ಕೆಲಸದ ಪ್ರಗತಿ ಮತ್ತು ಸೇವೆ ಸುಧಾರಣೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹಿಮ್ಮಾಹಿತಿ ವರದಿಯನ್ನು ನೀಡುವುದು.
- ಮಾಸಿಕ ಪ್ರಗತಿ ಮತ್ತು ಸೇವಾ ವಿತರಣಾ ವರದಿಗಳನ್ನು ಸಲ್ಲಿಸುವುದು.

## ಸ್ಮಾರಕಗಳನ್ನು ದತ್ತು ಪಡೆಯಲು ಸೂಚಿತ ಅರ್ಹತೆ ಮಾನದಂಡ

ಈ ಯೋಜನೆಯಡಿಯಲ್ಲಿ ಯಾವುದೇ ಕಂಪೆನಿ ಅಥವಾ ಸಂಸ್ಥೆ ಅಥವಾ ಪಾಲುದಾರಿಕೆ ಸಂಸ್ಥೆ ಅಥವಾ ಸೀಮಿತ ಹೊಣೆಗಾರಿಕೆ ಪಾಲುದಾರಿಕೆ (ಎಲ್‌ಎಲ್‌ಪಿ) ಅಥವಾ ಸಹಭಾಗಿತ್ವ ಸಂಸ್ಥೆಗಳು, ಸಹಕಾರ ನೋಂದಣಿ ಅಧಿನಿಯಮದಡಿ ಬರುವ ಸಹಕಾರ ಸಂಘ ಸಂಸ್ಥೆಗಳು, ಆಸಕ್ತ ಸಮಾಜ ಸೇವಾ ಸಂಸ್ಥೆಗಳು, ಸಹಕಾರ ಸಂಘಗಳು. ಟ್ರಸ್ಟ್‌ಗಳು, ಸರ್ಕಾರೇತರ ಸಂಸ್ಥೆಗಳು, ಆಸಕ್ತ ವ್ಯಕ್ತಿಗಳು ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷಗಳು, ಪಾರಂಪರಿಕ ಕಟ್ಟಡಗಳು ಮತ್ತು ಪಾರಂಪರಿಕ ಪ್ರದೇಶಗಳ ಸಂರಕ್ಷಣೆ, ರಕ್ಷಣೆ, ಪುನರ್‌ಸ್ಥಾಪನೆ ಮತ್ತು ವಾರ್ಷಿಕ ನಿರ್ವಹಣೆಗಾಗಿ ಪ್ರವಾಸಿ ಮೂಲಭೂತ ಮತ್ತು ಉನ್ನತ ಸೌಲಭ್ಯಗಳ ಅಭಿವೃದ್ಧಿಗಾಗಿ ಸ್ಮಾರಕಗಳನ್ನು ಕರ್ನಾಟಕ ಸರ್ಕಾರವು ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ಹೊರಡಿಸುವ ಅಧಿನಿಯಮ, ನಿಯಮಗಳು, ಮಾರ್ಗಸೂಚಿಗಳು, ಷರತ್ತು ಮತ್ತು ನಿಭಂದನೆಗಳಿಗೆ ಒಳಪಟ್ಟು ಸ್ಮಾರಕಗಳನ್ನು ದತ್ತು ತೆಗೆದುಕೊಳ್ಳಲು ಅರ್ಹತೆಯನ್ನು ಹೊಂದಿರುತ್ತಾರೆ. ಯಾವುದೇ ಕಂಪೆನಿ ಅಥವಾ ಸಂಸ್ಥೆ ಅಥವಾ ಪಾಲುದಾರಿಕೆ ಸಂಸ್ಥೆ ಅಥವಾ ಸೀಮಿತ ಹೊಣೆಗಾರಿಕೆ ಪಾಲುದಾರಿಕೆ (ಎಲ್‌ಎಲ್‌ಪಿ)



ಸಂಸ್ಥೆಗಳು ಸ್ಮಾರಕ ಮಿತ್ರರಾಗಿ ಅರ್ಹತೆ ಪಡೆಯಲು ಈ ಸೂಚಿತ ಮಾನದಂಡಗಳನ್ನು ಹೊಂದಿರಬೇಕು.



- ಅರ್ಜಿದಾರರು ಕಂಪನಿ ಅಥವಾ ಸೀಮಿತ ಹೊಣೆಗಾರಿಕೆ ಪಾಲುದಾರಿಕೆ (ಎಲ್‌ಎಲ್‌ಪಿ), ಅಥವಾ ಭಾರತದ ಕಾನೂನಿನ ಅನ್ವಯ ನೋಂದಾಯಿಸಲಾದ ಪಾಲುದಾರಿಕೆ ಸಂಸ್ಥೆಯಾಗಿರಬೇಕು
- ಅರ್ಜಿದಾರರು ಕನಿಷ್ಠ ಐದು(5) ವರ್ಷಗಳ ಕಾಲ ಕಾರ್ಯನಿರ್ವಹಿಸುತ್ತಿರಬೇಕು.
- ಅರ್ಜಿದಾರರು ಸದೃಢ ಆರ್ಥಿಕ ಸ್ಥಿತಿಯನ್ನು ಹೊಂದಿರಬೇಕು ಮತ್ತು ಸ್ಮಾರಕ ದತ್ತು ಯೋಜನೆಯ ವೆಚ್ಚದ ಮೊತ್ತಕ್ಕಾನುಣವಾಗಿ ಕಳೆದ ಐದು ಹಣಕಾಸು ವರ್ಷಗಳಲ್ಲಿ ಅರ್ಜಿದಾರರ ಆರ್ಥಿಕ ಸ್ಥಿತಿಯ ಕುರಿತು ಲೆಕ್ಕಪರಿಶೋಧಕರಿಂದ ಶಾಸನಬದ್ದ ದೃಢೀಕೃತ ಪ್ರಮಾಣಪತ್ರ.
- ಕಳೆದ ಐದು ವರ್ಷಗಳ ಅವಧಿಯಲ್ಲಿ ಸಿಎಸ್‌ಆರ್ (CSR Fumd) ನಿಧಿಯಡಿಯಲ್ಲಿ ಕೈಗೊಳ್ಳಲಾದ ವಿವರಗಳನ್ನು ಸಲ್ಲಿಸುವುದು.

## ಸಂಘ-ಸಂಸ್ಥೆಗಳು, ಟ್ರಸ್ಟ್‌ಗಳು ಸರ್ಕಾರೇತರ ಸಂಸ್ಥೆಗಳು (N.G.O and Trust) ಪ್ರಸ್ತುತ ಈ ಯೋಜನೆಯಡಿ ಭಾಗವಹಿಸಲು ಅವಕಾಶವನ್ನು ಕಲ್ಪಿಸಿ ಕೆಳಕಂಡ ನಿಗಧಿಪಡಿಸಿದ ವಿವರಿಸಿರುವ ಪೂರಕ ದಾಖಲೆಗಳು



- ಟ್ರಸ್ಟ್ ಡೀಡ್ ನೋಂದಣಿ ಪತ್ರ
- ಬೈಲಾ ಪ್ರತಿ
- ಸ್ವಯಂ ದೃಢೀಕೃತ ಪ್ಯಾನ್ ಕಾರ್ಡ್ ಪ್ರತಿ
- ಸ್ವಯಂ ದೃಢೀಕೃತ ಆಧಾರ್ ಕಾರ್ಡ್ ಪ್ರತಿ
- ಸ್ವಯಂ ದೃಢೀಕೃತ ಜಿ.ಎಸ್.ಟಿ ನೋಂದಣಿ ಪ್ರತಿ
- ವಿದೇಶಿ ಕೊಡುಗೆ ನಿಯಂತ್ರಣ ಕಾಯಿದೆ 2010 (Foreign Contribution Regulation Act 2010) ರನ್ವಯ ಅನುಮತಿ ಪತ್ರ. (ವಿದೇಶಿ ದೇಣಿಗೆಗಳು ಇದ್ದಲ್ಲಿ ಮಾತ್ರ)
- ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಅರ್ಜಿದಾರರ ಆರ್ಥಿಕ ಸ್ಥಿತಿಯ ಕುರಿತು ಲೆಕ್ಕಪರಿಶೋಧಕರಿಂದ ಶಾಸನಬದ್ದ ದೃಢೀಕೃತ ಪ್ರಮಾಣಪತ್ರ.
- ಕರ್ನಾಟಕ ಸೊಸೈಟಿಗಳ ನೋಂದಣಿ ಕಾಯಿದೆ 1960 (ಕೆಎಸ್‌ಆರ್ ಕಾಯಿದೆ 17 of 1960) (Karnataka Societies Registration Act 1960 (KSR Act 17 of 1960) ರಡಿ ಪ್ರಮಾಣ ಪತ್ರದ ಪ್ರತಿ
- ಅರ್ಜಿದಾರರು ಕಳೆದ ಮೂರು ವರ್ಷಗಳಲ್ಲಿ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಕೈಗೊಂಡ ಯೋಜನೆಗಳು ಯಾವುದಾದರೂ ಇದ್ದಲ್ಲಿ ಇದರ ಕುರಿತಂತೆ ಸಂಪೂರ್ಣ ಮಾಹಿತಿ. (ಕೆಲಸದ ಆದೇಶ, ಎಂಒಯು/ಒಡಂಬಡಿಕೆ, ಗುತ್ತಿಗೆ

ಪತ್ರ, ಖರೀದಿ ಆದೇಶ, ಪರವಾನಗಿ/ರಿಯಾಯಿತಿ, ಕಾರ್ಯ ಸಮಾಪ್ತಿ ಪ್ರಮಾಣಪತ್ರ, ತೃಪ್ತಿದಾಯಕ ಕಾರ್ಯಕ್ಷಮತೆಯ ಪ್ರಮಾಣಪತ್ರ, ಯೋಜನೆ/ ಉಪಕ್ರಮಕ್ಕಾಗಿ ಆದ ವೆಚ್ಚಕ್ಕೆ ಆಡಿಟರ್ ಪ್ರಮಾಣ ಪತ್ರ.)

## ಏಕವ್ಯಕ್ತಿಗಳು (Individual)



- ಸ್ವಯಂ ದೃಢೀಕೃತ ಪ್ಯಾನ್‌ಕಾರ್ಡ್ ಪ್ರತಿ.
- ಸ್ವಯಂ ದೃಢೀಕೃತ ಆಧಾರ್ ಕಾರ್ಡ್ ಪ್ರತಿ.
- ಸ್ವಯಂ ದೃಢೀಕೃತ ಜಿ.ಎಸ್.ಟಿ ನೋಂದಣಿ ಪ್ರತಿ (ಅವಶ್ಯಕತೆಯಿದ್ದಲ್ಲಿ)
- ಕಳೆದ ಐದು ಹಣಕಾಸು ವರ್ಷಗಳಲ್ಲಿ ಅರ್ಜಿದಾರರ ಆರ್ಥಿಕ ಸ್ಥಿತಿಯ ಕುರಿತು ಶಾಸನಬದ್ಧ ದೃಢೀಕೃತ ಪ್ರಮಾಣಪತ್ರ.
- ಅರ್ಜಿದಾರರು ಕಳೆದ ಐದು ವರ್ಷಗಳಲ್ಲಿ ಇಂತಹ ಯೋಜನೆಗಳು ಕೈಗೊಂಡಿದ್ದಲ್ಲಿ ಈ ಕುರಿತಂತೆ ಸಂಪೂರ್ಣ ಮಾಹಿತಿ. (ಕೆಲಸದ ಆದೇಶ, ಎಂಒಯು/ಒಡಂಬಡಿಕೆ, ಗುತ್ತಿಗೆ ಪತ್ರ, ಖರೀದಿ ಆದೇಶ, ಪರವಾನಗಿ/ ರಿಯಾಯಿತಿ, ಕಾರ್ಯ ಸಮಾಪ್ತಿ ಪ್ರಮಾಣಪತ್ರ, ತೃಪ್ತಿದಾಯಕ ಕಾರ್ಯಕ್ಷಮತೆಯ ಪ್ರಮಾಣಪತ್ರ, ಯೋಜನೆ/ಉಪಕ್ರಮಕ್ಕಾಗಿ ಆದ ವೆಚ್ಚಕ್ಕೆ ಆಡಿಟರ್ ಪ್ರಮಾಣ ಪತ್ರ.
- ಅರ್ಜಿದಾರರ ಅಧಿಕೃತ ಸಹಿದಾರರ ಪರವಾಗಿ ಕಾರ್ಯಗತಗೊಳಿಸಿದ ಪವರ್‌ಆಫ್‌ಅಟಾರ್ನಿ ಅಥವಾ ಅಧಿಕೃತ ಸಹಿದಾರರಿಗೆ ಅಧಿಕಾರ ನೀಡುವ ನಿರ್ದೇಶನ ನಿರ್ಣಯದ ಅಫಿಡವೇಟ್‌ಪ್ರತಿ. (ಆಯ್ಕೆ ಆದ ನಂತರ ಸಲ್ಲಿಸಬೇಕು)

## ಒಡಂಬಡಿಕೆ (ಎಂಒಯು)



ಸ್ಮಾರಕ ತಾಣದ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಅರ್ಜಿಯು ಅನುಮೋದನೆಯಾದ ನಂತರ ಸ್ಮಾರಕ ತಾಣದಲ್ಲಿ ನಿರ್ಮಾಣ ಮಾಡುವ ಸೌಕರ್ಯಗಳ ಅಂತಿಮ ಪಟ್ಟಿಯನ್ನು ಒಡಂಬಡಿಕೆ ಪತ್ರದ (ಎಂಒಯು) ಮೂಲಕ ದಾಖಲುಗೊಳಿಸಲಾಗುವುದು. ಸ್ಮಾರಕಗಳ ಸಂರಕ್ಷಣೆ, ಮೂಲಭೂತ ಸೌಲಭ್ಯಗಳು ಮತ್ತು ಉನ್ನತ ಸೌಕರ್ಯಗಳ ಅನುಷ್ಠಾನಕ್ಕೆ ನಿಗಧಿಪಡಿಸಿದ ವೇಳಾಪಟ್ಟಿಯನ್ನು ಒಡಂಬಡಿಕೆ ಪತ್ರದಲ್ಲಿ ನಮೂದಿಸಲಾಗುತ್ತದೆ.

## ವಿವರವಾದ ಯೋಜನಾ ವರದಿ (ಡಿಪಿಆರ್)

ಸಂಬಂಧಪಟ್ಟ ಎಲ್ಲರೂ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದ ನಂತರ, ಒಡಂಬಡಿಕೆ ಪತ್ರದಲ್ಲಿ ಸೂಚಿಸಿರುವ ನಿಗಧಿತ ಅವಧಿಯೊಳಗೆ ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಸ್ಮಾರಕ ಮಿತ್ರರು ಸಿದ್ಧಪಡಿಸಬೇಕು. ಈ ಡಿಪಿಆರ್‌ನಲ್ಲಿ ಕೆಳಕಂಡ ಎರಡು ಅಂಶಗಳನ್ನು ನಮೂದಿಸಬೇಕು:

- ಸ್ಮಾರಕ ತಾಣದಲ್ಲಿ ಕೈಗೊಳ್ಳುವ ಪ್ರತಿಯೊಂದು ಅಭಿವೃದ್ದಿ, ನಿರ್ವಹಣೆ ಕೆಲಸದ ವಿನ್ಯಾಸ, ರೇಖಾಚಿತ್ರಗಳು, ಸಾಮಗ್ರಿಗಳು, ಪ್ರಮಾಣ, ಸ್ಥಳ ನಕ್ಷೆ ಹಾಗೂ ವೆಚ್ಚದ ವಿವರಗಳನ್ನು ಪ್ರತ್ಯೇಕವಾಗಿ ನಮೂದಿಸಬೇಕು. ಸ್ಮಾರಕದ ಪುನರುಜ್ಜೀವನ ಅಥವಾ ಸಂರಕ್ಷಣೆ ಕೆಲಸ ಕೈಗೊಳ್ಳುವುದಿದ್ದರೆ ಅದನ್ನು ನೋಡಲ್ ಇಲಾಖೆಗಳೊಂದಿಗೆ ಚರ್ಚೆ ಮಾಡಿ, ಅಂತಿಮಗೊಂಡ ವಿವರಗಳನ್ನು ನಮೂದಿಸಬೇಕು.

- ಕೈಗೊಳ್ಳುವ ಪ್ರತಿಯೊಂದು ಅಭಿವೃದ್ಧಿ ಕೆಲಸ, ಬಂಡವಾಳ ಹೂಡಿಕೆ ಹಾಗೂ ಮುಂದಿನ ಐದು ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ತಗಲುವ ಅಂದಾಜು ವೆಚ್ಚಗಳನ್ನು ನಮೂದಿಸಬೇಕು.

- ಎಲ್ಲ ಮೂಲಭೂತ ಸೌಲಭ್ಯಗಳು ಮತ್ತು ಉನ್ನತ ಸೌಕರ್ಯಗಳ ಯೋಜನಾ ವರದಿಯನ್ನು ಒಟ್ಟಾರೆಯಾಗಿ ಅಥವಾ ಪ್ರತ್ಯೇಕವಾಗಿ ನಮೂದಿಸಬಹುದು. ಇದು ಅನುಷ್ಠಾನಕ್ಕೆ ನಿಗಧಿಪಡಿಸಿರುವ ಕಾಲಮಿತಿಗೆ ಅನುಗುಣವಾಗಿ ಇರಬೇಕು. ಈ ಯೋಜನಾ ವರದಿಯನ್ನು ಅನುಮೋದನೆಗಾಗಿ ನೋಡಲ್ ಇಲಾಖೆಗಳಿಗೆ ಸಲ್ಲಿಸಬೇಕು.

ಡಿಪಿಆರ್ ರೂಪಿಸಲು ಸ್ಮಾರಕ ಮಿತ್ರರು ಕೆಳಗಿನ ಕಾರ್ಯವಿಧಾನವನ್ನು ಅನುಸರಿಸಬೇಕು. ಪುರಾತತ್ವ ಇಲಾಖೆ ಮತ್ತು ನೋಡಲ್ ಇಲಾಖೆಗಳು ಯೋಜನಾ ವರದಿಗೆ ಅನುಮೋದನೆ ನೀಡಿದ ನಂತರವಷ್ಟೆ ಸ್ಮಾರಕ ತಾಣದಲ್ಲಿ ಅಭಿವೃದ್ಧಿ ಕೆಲಸಗಳನ್ನು ಆರಂಭಿಸಲು ಅನುಮತಿ ನೀಡಲಾಗುತ್ತದೆ.

**'ಸ್ಮಾರಕ ಮಿತ್ರರು'** ಆಯ್ಕೆ ಮಾಡಿಕೊಂಡ ಕರ್ನಾಟಕದ ಪಾರಂಪರಿಕ ಸ್ಮಾರಕಗಳ ಸಂರಕ್ಷಣೆ, ಮೂಲಭೂತ ಮತ್ತು ಉನ್ನತ ಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಸಂಸ್ಥೆಯ ವಿವರಗಳು, ಹಣಕಾಸು ಮತ್ತು ಅನುಭವ ಮೊದಲಾದ ವಿವರಗಳನ್ನು ಒಳಗೊಂಡ ಆಸಕ್ತಿ ಅಭಿವ್ಯಕ್ತಿಯ ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಸ್ಮಾರಕ ದತ್ತು ಯೋಜನೆಗೆ ಸಿದ್ಧಪಡಿಸಲಾದ ನಮ್ಮ ಸ್ಮಾರಕ ಡಿಜಿಟಲ್ ಫ್ಲಾಟ್ ಫಾರಂ ವೇದಿಕೆಯಾದ www.nammasmaraka.in ಅಥವಾ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ E-mail: commr_amh@yahoo.in ಮುಖಾಂತರ ಸಲ್ಲಿಸುವುದು.

**ಒಂದೇ ಸ್ಮಾರಕ ತಾಣಕ್ಕೆ ಬಹು ಬೇಡಿಕೆಗಳು ಬಂದಿದ್ದಲ್ಲಿ, ಸ್ಮಾರಕ ಸಮಿತಿಯು ಹೆಚ್ಚು ಸ್ಪರ್ಧಾತ್ಮಕವಾದ ಮತ್ತು ಹೊಸತನದ ದೃಷ್ಟಿಕೋನ ಇರುವ ಅರ್ಜಿಯನ್ನು ಆಯ್ಕೆ ಮಾಡಲಾಗುವುದು.**

**ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ**
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು – 570010
Karnatka Exhibition Authority Premises, Mysuru - 570010.
ದೂರವಾಣಿ / Tel : 0821-2424673
ಈ–ಮೇಲ್ / E-mail: commr_amh@yahoo.in
ವೆಬ್‌ಸೈಟ್ / web: www.nammasmaraka.in

